ಓ. ಎಸ್. ನಂಬರ:- 34/2023

ಡಿ.ಡಬ್ಲೂ-:-4 : ಮಲ್ಲಿಕಾರ್ಜುನ ತಂದೆ ಬಸವರಾಜ ಪಾಟೀಲ್

ದಿನಾಂಕ:- 25-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ ಎಸ್ ಎನ್ ಪಿ ವಕೀಲರಿಂದ.

ವಾದಿ ನಿಂಗಪ್ಪ ನನ್ನ ಸೋದರ ಮಾವನಾಗಿರುತ್ತಾರೆ. ೧ನೇ ಪ್ರತಿವಾದಿ ಸೋಮನಾಥ ಕೂಡಾ ನನ್ನ ಸೋದರ ಮಾವನಾಗಿರುತ್ತಾರೆ. ೨ನೇ ಪ್ರತಿವಾದಿ ಮಹಾದೇವಿರವರು ನನ್ನ ತಾಯಿಯಾಗಿರುತ್ತಾರೆ. ನಾನು ಮೇಳಕುಂದ ಗ್ರಾಮದಲ್ಲಿ ವಾಸ ಇರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಕಲಬುರಗಿಯಲ್ಲಿ ವಾಸ ಇದ್ದು, ಮೇಳಕುಂದ ಗ್ರಾಮಕ್ಕೆ ಹೋಗಿ-ಬಂದು ಮಾಡುತ್ತೇನೆ ಎನ್ನುತ್ತಾರೆ. ನಾನು ಆನಲೈನ್ ಗ್ರಾಮ ಓನ್ ಸೆಂಟರ ಮತ್ತು ರೇಷನ್ ಅಂಗಡಿ ಇಟ್ಟುಕೊಂಡಿರುತ್ತೇನೆ. ಅವು ಮೇಳಕುಂದ ಗ್ರಾಮದಲ್ಲಿರುತ್ತವೆ. ಮೇಳಕುಂದ ಗ್ರಾಮದಲ್ಲಿ ೧೪೦೦ ಮತದಾರರು ಇರುತ್ತಾರೆ. ಮೇಳಕುಂದ ಗ್ರಾಮದಲ್ಲಿ ನಮ್ಮ ತಂದೆಗೆ ೩ ಎಕರೆ ನೀರಾವರಿ ಜಮೀನು ಇರುತ್ತದೆ. ಸದರಿ ಜಮೀನಿನ ಸ್ವಾಧೀನದಲ್ಲಿ ನಾವೆ ಇರುತ್ತೇವೆ. ನನ್ನ ತಂದೆ ೨೦೧೪ ರಲ್ಲಿ ಮೃತರಾಗಿರುತ್ತಾರೆ. ನನ್ನ ತಾಯಿ ಮೇಳಕುಂದ ಗ್ರಾಮದಲ್ಲಿ ಒಬ್ಬರೆ ವಾಸ ಇರುತ್ತಾರೆ. ನಮ್ಮ ತಾಯಿಗೆ ನಾನು ಮತ್ತು ನನ್ನ ಅಕ್ಕ ಇಬ್ಬರು ಮಕ್ಕಳು ಇರುತ್ತೇವೆ. ರೇಷನ್ ಅಂಗಡಿಯನ್ನು ನಮ್ಮ ತಂದೆಯ ಕಾಲದಿಂದ ನಾವು ನಡೆಸುತ್ತಿದ್ದೇವೆ. ಗ್ರಾಮ ಓನ್ ಸೆಂಟರನ್ನು ನಾನು ೪-೫ ವರ್ಷಗಳಿಂದ ನಡೆಸುತ್ತಿದ್ದೇನೆ.

೨. ದಾವಾ ಜಮೀನುಗಳು ನಮ್ಮ ತಾಯಿಯ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ರೇಷನ್ ಅಂಗಡಿ ಮತ್ತು ಗ್ರಾಮ ಓನ್ ಸೆಂಟರನಿಂದ ನನಗೆ ತಿಂಗಳಿಗೆ ಸುಮಾರು ರೂ.೫೦,೦೦೦/- ಆದಾಯ ಇರುತ್ತದೆ. ಸದರಿ ಆದಾಯ ನನಗೆ ಇರುವ ಕುರಿತು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ. ಮೇಳಕುಂದದಲ್ಲಿ ಮನೆ ಇರುತ್ತದೆ, ಅದು ನಮ್ಮ ಅಜ್ಜಿಯ ಹೆಸರಿನಲ್ಲಿರುತ್ತದೆ. ನನ್ನ ಮಾವ ಸೋಮನಾಥರವರ ಹೆಸರಿನಲ್ಲಿ ಮೇಳಕುಂದದಲ್ಲಿ ಮನೆ ಇರುವುದಿಲ್ಲ. ನನ್ನ ತಾಯಿಯ ಜೊತೆಗೆ ನಾನು ಒಳ್ಳೆಯ ಸಂಬಂಧ ಹೊಂದಿರುತ್ತೇನೆ. ಈ ದಾವೆಯ ವಿಚಾರವನ್ನು ನನ್ನ ತಾಯಿ ನನಗೆ ತಿಳಿಸಿರುವುದಿಲ್ಲ. ನನ್ನ ತಾಯಿಯನ್ನು ಈ ದಾವೆಯಲ್ಲಿ ಯಾರು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ನಿಂಗಪ್ಪರವರ ಜೊತೆಗೆ ಈ ಕೇಸು ಹಾಕಿದ ನಂತರ ನಮ್ಮ ನಡುವೆ ಮಾತು-ಕಥೆ ಇರುವುದಿಲ್ಲ, ಮೊದಲು ನಾವು ಮಾತನಾಡುತ್ತಿದ್ದೇವು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.